

# ರಾಜ್ ಕುಟುಂಬದ ಕೊನರು

ರಾಜ್‌ಕುಮಾರ್ ಕುಟುಂಬದ ಕುಡಿ ವಿನಯ ರಾಜ್‌ಕುಮಾರ್ ಚಿತ್ರಬದುಕಿಗೆ ಕಾಲಿಟ್ಟಿದ್ದು 2015ರಲ್ಲಿ ‘ಸಿದ್ಧಾರ್ಥ’ ಸಿನಿಮಾ ಮೂಲಕ. ಆ ಚಿತ್ರ ಅಷ್ಟೇನೂ ಸದ್ದು ಮಾಡಲಿಲ್ಲ. ಹಾಗೆಯೇ 2016ರಲ್ಲಿ ‘ರನ್ ಆ್ಯಂಟನಿ’ ಎಂಬ ಇನ್ನೊಂದು ಚಿತ್ರ ಮಾಡಿದರೂ ಅವರಿಗೆ ಯಶಸ್ಸು ಕೈಗೆಟುಕದ ಕುಸುಮವೇ ಆಗಿತ್ತು. ಆದರೆ ಸೋಲು–ಗೆಲುವುಗಳನ್ನು ಅಭಿಮಾನಿ ದೇವರುಗಳ ವರಪ್ರಸಾದ ಎಂದುಕೊಂಡು ಸ್ವೀಕರಿಸುವ ಗುಣ ಅವರ ರಕ್ತದಲ್ಲಿಯೇ ಬಂದಿದೆಯೋ ಎಂಬಂತೆ ವಿನಯ್, ಇನ್ನಷ್ಟು ಸಿದ್ಧತೆಯೊಂದಿಗೆ ತೆರೆಯ ಮೇಲೆ ಬರಲು ಸಜ್ಜಾಗಿದ್ದಾರೆ.

'ಅನಂತು ವರ್ಸಸ್ ನುಸ್ರತ್’ ಮತ್ತು ‘ಗ್ರಾಮಾಯಣ’ ಅವರ ಮುಂದಿನ ಸಿನಿಮಾಗಳು. ಒಂದು ಲಘು ಕಾಮಿಡಿ ಜಾನರ್ ಸಿನಿಮಾ ಆದರೆ ಇನ್ನೊಂದು ಪಕ್ಕಾ ಹಳ್ಳಿಯ ಕಥೆ. ಹೊಸ ಹೊಸ ಪರಿವೇಷಗಳಲ್ಲಿ ಕಾಣಿಸಿಕೊಳ್ಳಬೇಕು; ಯಾವುದು ಪ್ರೇಕ್ಷಕರಿಗೆ ಇಷ್ಟವಾಗುತ್ತದೆಯೋ ಕಾದು ನೋಡಬೇಕು ಎಂಬುದು ಅವರ ಮನಸಲ್ಲಿ ಇರುವಂತೆ ತೋರುತ್ತದೆ. ಈ ಎರಡು ಸಿನಿಮಾಗಳ ಕುರಿತು ಚಿತ್ರರಂಗದಲ್ಲಿ ಈಗಾಗಲೇ ಒಳ್ಳೆಯ ಮಾತುಗಳು ಕೇಳಿಬರುತ್ತಿವೆ. ‘ರಾಜ್ ಕುಟುಂಬದ ಹೊಸ ಪೀಳಿಗೆಯ ನಟ ಈ ಸಿನಿಮಾಗಳಲ್ಲಿ ಇನ್ನಷ್ಟು ಪ್ರಬುದ್ಧನಾಗಿ ಕಾಣಿಸುತ್ತಿದ್ದಾನೆ’ ಎಂಬ ಹಿರಿಯರೊಬ್ಬರ ಮಾತುಗಳು ವಿನಯ್ ಕಣ್ಣುಗಳಲ್ಲಿನ ವಿಶ್ವಾಸದ ಕುರಿತೂ ಆಡಿದ ಹಾಗಿದೆ.

# ಹರಿಕೃಷ್ಣ ಹೊಸ ಇನಿಂಗ್ಸ್!



‘ಮುಂಗಾರು ಮಳೆ’ ಸಿನಿಮಾ ಅಭೂತಪೂರ್ವ ಯಶಸ್ಸು ಕಂಡಿತ್ತು. ಎಲ್ಲರೂ ಆ ಚಿತ್ರವನ್ನು ಕೊಂಡಾಡುತ್ತಿದ್ದರೆ, ನಿರ್ದೇಶಕ ಯೋಗರಾಜ ಭಟ್ಟರಿಗೆ ಮಾತ್ರ ಮನಸೊಳಗೊಂದು ಯೋಚನೆ ಗುಂಗಿಹುಳದಂತೆ ಕೊರೆಯುತ್ತಿತ್ತು. ಅಷ್ಟೊಂದು ದೊಡ್ಡ ಹಿಟ್ ಸಿನಿಮಾ ಕೊಟ್ಟ ನಿರ್ದೇಶಕನ ಮುಂದಿನ ಚಿತ್ರದ ಕುರಿತೂ ಜನರಿಗೆ ಅಷ್ಟೇ ದೊಡ್ಡ ನಿರೀಕ್ಷೆ ಇರುತ್ತದಲ್ಲ. ಬೇರೆಯವರಿಗಲ್ಲ, ಸ್ವತಃ ಭಟ್ಟರಿಗೇ ಮುಂಗಾರುಮಳೆಯ ಗುಂಗಿನಿಂದ ಹೊರಗೆ ಬಂದು ಸಿನಿಮಾ ಮಾಡಬೇಕು ಅನಿಸಿತ್ತು. ಆಗ ಅವರು ಕೈಗೆತ್ತಿಕೊಂಡಿದ್ದು ‘ಗಾಳಿಪಟ’ ಚಿತ್ರ. ಮುಂಗಾರುಮಳೆ ಚಿತ್ರದಲ್ಲಿ ಸೂಪರ್‌ಹಿಟ್ ಟ್ಯೂನ್ ಕೊಟ್ಟಿದ್ದ ಮನೋಮೂರ್ತಿ ಅವರನ್ನೇ ಮುಂದಿನ ಚಿತ್ರಕ್ಕೂ ಸಂಗೀತ ನಿರ್ದೇಶಕರನ್ನಾಗಿಸಿದರೆ ಹಳೆಯ ಗುಂಗು ಮುಂದುವರಿಯಬಹುದೆಂಬ ಆತಂಕ ಭಟ್ಟರದು. ಆಗ ಅವರ ಕಣ್ಣಿಗೆ ಬಿದ್ದಿದ್ದು ವಿ. ಹರಿಕೃಷ್ಣ.

‘ಗಾಳಿಪಟ’ ಚಿತ್ರದ ಹಾಡುಗಳು ಹರಿಕೃಷ್ಣ ಅವರಿಗೆ ಮಾಧುರ್ಯದ ಹೊಸ ಇಮೇಜ್ ತಂದುಕೊಟ್ಟವು. ಅಲ್ಲಿ ಭೇಟಿಯಾದ ಹರಿ–ಭಟ್ಟರ ಜೋಡಿ ಇತ್ತೀಚೆಗಿನ ‘ಪಂಚತಂತ್ರ’ದವರೆಗೂ ಮುಂದುವರಿದಿದೆ.

ಕಳೆದ ನವೆಂಬರ್ 5ರಂದು 44ನೇ ಜನ್ಮದಿನ ಆಚರಿಸಿಕೊಂಡ ಹರಿಕೃಷ್ಣ ವೃತ್ತಿಬದುಕಿನಲ್ಲಿ ಹೊಸ ಇನಿಂಗ್ಸ್ ಆರಂಭವಾಗುವ ಎಲ್ಲ ಲಕ್ಷಣಗಳೂ ಗೋಚರಿಸುತ್ತಿವೆ. ಇದರ ಸೂಚನೆಯಾಗಿಯೇ ದರ್ಶನ್ ಅಭಿನಯದ ‘ಯಜಮಾನ’ ಸಿನಿಮಾದ ಟೈಟಲ್ ಕಾರ್ಡ್‌ನಲ್ಲಿ ಸಂಗೀತ ನಿರ್ದೇಶನದ ಜತೆಗೆ ನಿರ್ದೇಶನದ ಪಟ್ಟಿಯಲ್ಲಿ ಪಿ. ಕುಮಾರ್ ಜತೆಗೆ ಹರಿಕೃಷ್ಣ ಅವರ ಹೆಸರೂ ಸೇರಿಕೊಂಡಿದೆ. ಸಂಗೀತ ನಿರ್ದೇಶನ, ಗಾಯನದ ಜತೆಗೆ ನಿರ್ದೇಶನದ ಟೋಪಿಯನ್ನೂ ಹರಿಕೃಷ್ಣ ಅಧಿಕೃತವಾಗಿ ತೊಟ್ಟುಕೊಂಡಂತಾಗಿದೆ.

ದರ್ಶನ್ ಸಿನಿಮಾಗಳು ಎಂದರೆ ಹರಿಕೃಷ್ಣ ಅವರಿಗೆ ವಿಶೇಷ ಪ್ರೀತಿ. ಯಾಕೆಂದರೆ ಅವರಿಗೆ ಸಂಗೀತ ನಿರ್ದೇಶನದ ಮೊದಲ ಅವಕಾಶ ಸಿಕ್ಕಿದ್ದು ದರ್ಶನ್ ನಿರ್ಮಾಣದ ‘ಜತೆ ಜತೆಯಲಿ’ ಸಿನಿಮಾದ ಮೂಲಕ. ಅದರ ನಂತರ ದರ್ಶನ್ ಅಭಿನಯದ ಬಹುತೇಕ ಸಿನಿಮಾಗಳಲ್ಲಿ ಅವರು ಸಂಗೀತ ನಿರ್ದೇಶನ ಮಾಡಿದ್ದಾರೆ. ಅವರಿಂದ ತಮಗೆ ಸಿಕ್ಕಿದ ಬೆಂಬಲದ ಸೂಚಕವಾಗಿ ತಮ್ಮ ಆಡಿಯೊ ಪ್ರೊಡಕ್ಷನ್ ಕಂಪನಿಗೂ ‘ಡಿ– ಬಿಟ್ಸ್’ ಎಂದೇ ಹೆಸರಿಟ್ಟಿದ್ದಾರೆ ಹರಿಕೃಷ್ಣ. ಇದೀಗ ಅವರಿಗೆ ನಿರ್ದೇಶಕನ ಪಟ್ಟವನ್ನೂ ದರ್ಶನ್ ಸಿನಿಮಾವೇ ನೀಡಿದೆ. ಮುಂದೆ ಈ ಹೊಸ ಹುದ್ದೆಯಲ್ಲಿಯೇ ಮುಂದುವರಿಯುತ್ತಾರೋ ಅಥವಾ ಸಂಗೀತದ ಸಹವಾಸವೇ ಸಾಕು ಎಂದು ಸುಮ್ಮನಿರುತ್ತಾರೆಯೋ ಎಂಬುದನ್ನು ಕಾದು ನೋಡಬೇಕಿದೆ.